<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>

**ಸಿಸಿ ನಂಬರ್ 995/2023**

| | | |
|---|---|---|
| ಸಾಕ್ಷಿಯ ಹೆಸರು | : ದಿನೇಶ್ ಕುಮಾರ್ | ಸಿ.ಡಬ್ಲ್ಯು 8 |
| ತಂದೆಯ ಹೆಸರು | : ನಂಜುಂಡಪ್ಪ | ಪಿ.ಡಬ್ಲ್ಯು4 |
| ವಯಸ್ಸು | : 50 ವರ್ಷ | |
| ಉದ್ಯೋಗ | : ಮುಖ್ಯ ಪೇದೆ | |
| ವಾಸ ಸ್ಥಳ | : ಎನ್.ಆರ್.ಪುರ | |

ದಿನಾಂಕಃ**11.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>

ನಾನು 2019 ರಿಂದ 2024 ರವರ ಮಧ್ಯದಲ್ಲಿ ತರೀಕೆರೆಯಲ್ಲಿ ಮುಖ್ಯ ಪೇದೆ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿಃ16.11.2022 ರಂದು ರಾತ್ರಿ 8.00 ಗಂಟೆ ಸಮಾರಿಗೆ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ನೀಡಿದ ದೂರು, ಮಹಜರ್ ಮುದ್ದೆಮಾಲನ್ನು ಸ್ವೀಕರಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಮುದ್ದೆಮಾಲಿನ ಕುರಿತು ಪಿಎಫ್ ವರದಿ ಸಲ್ಲಿಸಿದ್ದೇನೆ.

ದಿಃ17.11.2022 ರಂದು ಚಾಸಾ-2 ರಿಂದ 6 ರವರುಗಳ ಹೇಳಿಕೆಗಳನ್ನು ದಾಖಲೆ ಮಾಡಿಕೊಂಡಿರುತ್ತೇನೆ. ಅದೇ ದಿನ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ರಸಾಯನಿಕ ವಿಶ್ಲೇಷಣೆಗಾಗಿ ಚಾಸಾ-7 ರವರಿಗೆ ಕಳುಹಿಸಿಕೊಟ್ಟಿದ್ದೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ವಹಿಸಿಕೊಟ್ಟಿದ್ದೇನೆ. ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರ ಮೇಲಿನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಪ್ರ.ವ.ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ನನ್ನ ಮುಂದೆ ಚಾಸಾ-3 ರವರು ನಿಪಿ-4 ರಂತೆ ಹೇಳಿಕೆ ನೀಡಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ</u>

ಚಾಸಾ-1 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಅವರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಪ್ರ.ವ.ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ದಿಃ17.11.2022 ರಂದು ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ .</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.